ಗದಗ ಜಿಲ್ಲೆಯಲ್ಲಿರುವ ಕೆ.ಹೆಚ್. ಪಾಟೀಲ್ ಕ್ರೀಡಾಂಗಣ ನಿರ್ಮಾಣ ಕಾರ್ಯದ ಪ್ರಗತಿ ಬಗ್ಗೆ

2248 (3111) ಶ್ರೀ ಡಿ.ಆರ್. ಪಾಟೀಲ್ (ಗದಗ) :— ಮಾನ್ಯ ಯುವಜನ ಸೇವಾ ಮತ್ತು ಕ್ರೀಡಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಕರ್ನಾಟಕ ರಾಜ್ಯದ ಎಲ್ಲಾ ಜಿಲ್ಲಾ ಕೇಂದ್ರಗಳು ಸುಸಜ್ಜಿತ ಕ್ರೀಡಾಂಗಣ ಹೊಂದಿದೆಯೇ?

ಆ) ಹಾಗಿಲ್ಲದಿದ್ದರೆ, ಎಷ್ಟು ಜಿಲ್ಲಾ ಕೇಂದ್ರಗಳಲ್ಲಿ ಕ್ರೀಡಾಂಗಣಗಳು ನಿರ್ಮಾಣವಾಗಬೇಕಾಗಿದೆ?

ಇ) ಗದಗದಲ್ಲಿರುವ ಕೆ.ಹೆಚ್. ಪಾಟೀಲ್ ಕ್ರೀಡಾಂಗಣದ ನಿರ್ಮಾಣ ಕಾರ್ಯ ಎಂದು ಪೂರ್ಣಗೊಳಿಸಲಾಗುವುದು?

ಈ) ಈಗ ಕ್ರೀಡಾಂಗಣದಲ್ಲಿ ಒದಗಿಸಲಾಗಿರುವ ಸೌಲಭ್ಯಗಳೇನು?

ಶ್ರೀ ಎಸ್.ಎಸ್. ಮಲ್ಲಿಕಾರ್ಜುನ್ (ಯುವಜನ ಸೇವೆಗಳು ಮತ್ತು ಕ್ರೀಡಾ ರಾಜ್ಯ ಸಚಿವರು) :—

ಅ) ಇಲ್ಲ.

ಆ) ನೂತನವಾಗಿ ರಚಿಸಿರುವ 7 ಜಿಲ್ಲಾ ಕೇಂದ್ರಗಳಲ್ಲಿ ಕ್ರೀಡಾಂಗಣಗಳು ನಿರ್ಮಾಣವಾಗಬೇಕಾಗಿದೆ. ಬೆಂಗಳೂರು ಗ್ರಾಮಾಂತರ ಜಿಲ್ಲಾ ಕ್ರೀಡಾಂಗಣವನ್ನು ಹೊಸಕೋಟೆಯಲ್ಲಿ ಹಾಗೂ ಹಾರಾವರ ಜಿಲ್ಲಾ ಕ್ರೀಡಾಂಗಣವನ್ನು ಸಿರ್ಸಿಯಲ್ಲಿ ನಿರ್ಮಿಸಲಾಗಿದೆ.

ಇ) ಗದಗ ಜಿಲ್ಲೆಯಲ್ಲಿ ಕೆ.ಹೆಚ್. ಪಾಟೀಲ್ ಕ್ರೀಡಾಂಗಣವನ್ನು ರೂ. 3.23 ಕೋಟಿ ಅಂದಾಜು ವೆಚ್ಚದಲ್ಲಿ ನಿರ್ಮಿಸಲು ಸರ್ಕಾರದ ಆಡಳಿತಾತ್ಮಕ ಮಂಜೂರಾತಿ ನೀಡಿದ್ದು, ಕ್ರೀಡಾಂಗಣವನ್ನು ನಿರ್ಮಿಸಲು ಬೇಕಾಗಿರುವ ಈ ಹಣವನ್ನು ಉದ್ದೇಶಿಸಿರುವ ವಿವಿಧ ಮೂಲಗಳಿಂದ ಪಡೆದ ನಂತರ ಕ್ರೀಡಾಂಗಣವನ್ನು ಪೂರ್ಣಗೊಳಿಸಲಾಗುವುದು.

ಈ) ಗದಗ ಜಿಲ್ಲಾ ಕ್ರೀಡಾ ಸಂಕೀರ್ಣದಲ್ಲಿ ಈ ಕೆಳಕಾಣಿಸಿದ ಹೊರಾಂಗಣ ಕ್ರೀಡೆಗಳ ಸೌಲಭ್ಯಗಳನ್ನು ಒದಗಿಸಲಾಗಿದೆ.

(1) ಅಥ್ಲೆಟಿಕ್ಸ್ (400 ಮೀ. ಸಿಂಗಲ್ ಟ್ರಾಕ್)

(2) ಕ್ರಿಕೆಟ್ (3) ಫುಟ್ ಬಾಲ್ (4) ಬಾಸ್ಕೆಟ್ ಬಾಲ್, (5) ವಾಲಿಬಾಲ್ (6) ಸ್ಕೇಟಿಂಗ್ ರಿಂಗ್ ಹಾಗೂ ಈ ಕೆಳಕಂಡ ಒಳಾಂಗಣ ಕ್ರೀಡೆಗಳಿಗೆ ಸೌಲಭ್ಯಗಳನ್ನು ಒದಗಿಸಲಾಗಿದೆ.

(1) ಬ್ಯಾಡ್ ಮಿಂಟನ್ (2) ಬಲಿಯರ್ಡ್ಸ್ (3) ಜಿಮ್ನಾಸ್ಟಿಕ್ (4) ಕೇರಂ.